**ಸಿ.ಡಬ್ಲೂ.-03 / ಪಿ.ಡಬ್ಲೂ-03**

## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 249/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಜ್ಯೋತಿಕುಮಾರ್ |
| ತಂದೆಯ ಹೆಸರು | : | ತಿಮ್ಮಯ್ಯ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಉಪನ್ಯಾಸಕರು |
| ವಾಸಸ್ಥಳ | : | ಹೆಗ್ಗಡಾಪುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ನನ್ನ ತಂದೆ. ಚಾಸಾ-2 ನನ್ನ ತಾಯಿ. ಚಾಸಾ-6 ರವರ ಪರಿಚಯವಿರುವುದಿಲ್ಲ.

ದಾಸನಪುರ ಗ್ರಾಮದ ಸ.ನಂ. 10 ರಲ್ಲಿ 04 ಎಕರೆ ಜಮೀನನ್ನು ನಾವು ಕಳೆದ ಸುಮಾರು 30 ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೆವು. ಆರೋಪಿಗಳು ಬೇರೆ ಗ್ರಾಮದಲ್ಲಿ ವಾಸವಿರುತ್ತಾರೆ. ದಿನಾಂಕಃ 13.05.2024 ರಂದು ಮಧ್ಯಾಹ್ನ ಸುಮಾರು 02.30 ಗಂಟೆ ಸಮಯದಲ್ಲಿ ಆರೋಪಿಗಳು ಏಕಾ-ಏಕಿ ಸದರಿ ನಮ್ಮ ಜಮೀನಿನ ಬಳಿ ಬಂದು ಅದರ ಗಿಡ-ಗಂಟೆಗಳನ್ನು ಕೊಚ್ಚುತ್ತಿದ್ದರು. ಆಗ ನಾನು, ನನ್ನ ತಂದೆಯಾದ ಚಾಸಾ-1 ಹಾಗು ನನ್ನ ತಾಯಿಯಾದ ಚಾಸಾ-2 ರವರು ಸದರಿ ಜಮೀನಿನ ಬಳಿ ಹೋಗಿ 1 ಮತ್ತು 2 ನೇ ಆರೋಪಿಗಳಲ್ಲಿ ಏಕೆ ನಮ್ಮ ಜಮೀನಿಗೆ ಬಂದು

ಗಿಡ-ಗಂಟೆಗಳನ್ನು ಕೊಚ್ಚುತ್ತಿದ್ದೀರಿ ಎಂದು ಕೇಳಿದ್ದು ಆಗ ಆರೋಪಿಗಳು ನಮ್ಮೊಂದಿಗೆ ಗಲಾಟೆ ಮಾಡಿ 1 ನೇ ಆರೋಪಿ ದೊಣ್ಣೆ ಹಾಗು ಚಪ್ಪಲಿಯಿಂದ ನನ್ನ ತಂದೆಯಾದ ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ. ಅಲ್ಲದೇ ನನ್ನ ತಂದೆಗೆ ಹೊಟ್ಟೆಯ ಭಾಗದಲ್ಲಿ ಆಪರೇಷನ್ ಆಗಿದ್ದು ಸದರಿ ಜಾಗವನ್ನು ಅದುಮಿರುತ್ತಾರೆ. ಆಗ ನಾನು ಜಗಳ ಬಿಡಿಸಲು ಹೋಗಿದ್ದು 2 ನೇ ಆರೋಪಿಯು ಚಪ್ಪಲಿಯಿಂದ ನನಗೂ ಸಹ ಹಲ್ಲೆ ಮಾಡಿರುತ್ತಾರೆ. ಅಲ್ಲದೇ 1 ನೇ ಆರೋಪಿಯು ನಮ್ಮ ಜಮೀನಿನಲ್ಲಿ ಗಿಡ-ಗಂಟೆಗಳನ್ನು ಕೊಚ್ಚಲು ತಂದಿದ್ದ ಮಚ್ಚಿನಿಂದ ನನ್ನ ಎಡಗೈಗೆ ಹಲ್ಲೆ ಮಾಡಿರುತ್ತಾರೆ. ಆಗ ನನ್ನ ತಾಯಿಯಾದ ಚಾಸಾ-2 ರವರು ಜಗಳ ಬಿಡಿಸಲು ಬಂದಿದ್ದು 2 ನೇ ಆರೋಪಿಯು ನನ್ನ ತಾಯಿಗೆ ಚಪ್ಪಲಿಯಿಂದ ಹಲ್ಲೆ ಮಾಡಿ ಅವರ ಕರಿಮಣಿ ಸರವನ್ನು ಎಳೆದು ಅವರ ಕುತ್ತಿಗೆಗೆ ಬಿಗಿದು ಉಸಿರಾಡದಂತೆ ಹಲ್ಲೆ ಮಾಡಿರುತ್ತಾರೆ. ಆಗ ಅಕ್ಕ-ಪಕ್ಕದವರು ಬಂದು ಸಮಾಧಾನಪಡಿಸಿ ಗಲಾಟೆ ಬಿಡಿಸಿರುತ್ತಾರೆ. ನಂತರ ನಾನು, ನನ್ನ ತಂದೆ-ತಾಯಿಯಾದ ಚಾಸಾ-1 ಮತ್ತು ಚಾಸಾ-2 ರವರು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇವೆ. ಅಲ್ಲಿ ಪೋಲೀಸರು ಬಂದು ನಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ಅನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

<u>**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**</u>

2 ನೇ ಆರೋಪಿಯು ನನ್ನ ತಾಯಿಯಾದ ಚಾಸಾ-2 ರವರ ಕರಿಮಣಿ ಸರವನ್ನು ಕಿತ್ತು ಹಾಕಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕರಿಮಣಿ ಸರವನ್ನು ಎಳೆದು ಕುತ್ತಿಗೆಯನ್ನು ಬಿಗಿದಿರುತ್ತಾರೆಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಎಂ.ಎನ್.ಆರ್. / ಶ್ರೀ. ಬಿ.ವಿ.ಎಸ್. ವಕೀಲರಿಂದಃ**

1 ನೇ ಆರೋಪಿ ನನ್ನ ತಂದೆಯ ತಮ್ಮ ಅಂದರೆ ಚಿಕ್ಕಪ್ಪ. 2 ನೇ ಆರೋಪಿ ನನ್ನ ಚಿಕ್ಕಪ್ಪನ ಮಗಳು. ಆರೋಪಿಗಳು ಹುಲಿಕುರ ಗ್ರಾಮದಲ್ಲಿ ವಾಸವಿರುತ್ತಾರೆ. ಸದರಿ ದಾಸನಪುರ ಗ್ರಾಮದ ಸ.ನಂ. 10ರ ಜಮೀನು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಅದು ಯಾವ ಪತ್ರದ ಅಡಿಯಲ್ಲಿ ಬಂದಿರುತ್ತದೆಂದು ಕೇಳಲಾಗಿ ಸಾಕ್ಷಿಯು ಅದು ಇನ್ನು ಹಂಚಿಕೆಯಾಗಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಸ.ನಂ. 10ರ 04 ಎಕರೆ ಜಮೀನಿನ ಪೈಕಿ 02 ಎಕರೆ ಜಮೀನಿನಲ್ಲಿ ಆರೋಪಿಗಳು ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಆರೋಪಿಗಳು 02 ಎಕರೆ ಹೊಲ ಹಾಗು 20 ಗುಂಟೆ ಗದ್ದೆ ಎಂದು ಹೇಳಿದ ಜಮೀನಿನ ಸ.ನಂ. ಹುಲಿಕುರ ಗ್ರಾಮದ ಸ.ನಂ. 77/1 ಆಗಿರುತ್ತದೆ. ಸದರಿ ಜಮೀನಿನ ಸ್ವಾಧೀನದಲ್ಲಿ ಆರೋಪಿಗಳು ಇರುವುದಿಲ್ಲ ಬದಲಾಗಿ ನಮ್ಮ ಅಜ್ಜಿಯಾದ ತಿಮ್ಮಮ್ಮರವರು ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಏಕಾ-ಏಕಿ ಸದರಿ ಜಮೀನಿನ ಗಿಡ-ಗಂಟಿಗಳನ್ನು ಕೀಳಲು ಬಂದಿರುವುದಿಲ್ಲ ಬದಲಾಗಿ ಅವರಿಗೆ ಸೇರಿದ 02 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ಬಂದಿರುತ್ತಾರೆಂದರೆ ಸರಿಯಲ್ಲ. ಆ ರೀತಿ

ಆರೋಪಿಗಳು ವ್ಯವಸಾಯ ಮಾಡಲು ಬಂದಾಗ ನಾನು, ನನ್ನ ತಂದೆ ಹಾಗು ತಾಯಿ ಆರೋಪಿಗಳ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿದ್ದು ಆ ಸಂಬಂಧ ಆರೋಪಿಗಳು ನನ್ನ, ನನ್ನ ತಂದೆ ಹಾಗು ತಾಯಿಯ ವಿರುದ್ಧ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದು ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ಚಾಸಾ-1 ರವರ ಮೂಲಕ ಸುಳ್ಳು ದೂರನ್ನು ನೀಡಿ ಈಗ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ನನಗಾಗಲೀ, ಚಾಸಾ-1 ಮತ್ತು ಚಾಸಾ-2 ರವರಿಗಾಗಲೀ ಕೈಯಿಂದ, ಮಚ್ಚಿನಿಂದ ಅಥವಾ ಚಪ್ಪಲಿಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿ ನನ್ನ ತಾಯಿಯಾದ ಚಾಸಾ-2 ರವರ ಕರಿಮಣಿ ಸರವನ್ನು ಹಿಡಿದು ಎಳೆದು ಹರಿದಿರುವುದಿಲ್ಲವೆಂದರೆ ಸರಿಯಲ್ಲ. ನಾನು ಮೇಲೆ ತಿಳಿಸಿದ ಸ.ನಂ. 10 ರಲ್ಲಿನ 04 ಎಕರೆ ಜಮೀನಿಗೆ ಸಂಬಂಧಿಸಿದಂತೆ ನನ್ನ ಅಜ್ಜಿಯು ನನ್ನ ವಿರುದ್ಧ ಸಿವಿಲ್ ದಾವೆ ಹೂಡಿದ್ದು ಸದರಿ ದಾವೆಯಲ್ಲಿ ನಮ್ಮ ವಿರುದ್ಧ ತೀರ್ಪು ಆಗಿದ್ದರಿಂದ ಆರೋಪಿಗಳ ವಿರುದ್ಧ ಸುಳ್ಳು ಆರೋಪ ಮಾಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯಾದ ಚಾಸಾ-1 ರವರು ನೀಡಿದ ಸುಳ್ಳು ದೂರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇರುವುದಿಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**